# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬಿಬಿಎಂಪಿ/ವಾ.22/ಜೆ.ಸಿ ಉ/ಪಿಆರ್/64/2022-23

ಸಹಾಯಕ ಅಭಿಯಂತರರ ಕಛೇರಿ
ಜೆ.ಸಿ ನಗರ ಉಪ-ವಿಭಾಗ, ಪೂರ್ವ ವಲಯ
ವಿ. ನಾಗೇನಹಳ್ಳಿ, ವಾರ್ಡ್ ನಂ;22
ಬೆಂಗಳೂರು – 560032.
ದಿನಾಂಕ: 15-10-2022

## ದಿನಾಂಕ; 15-10-2022 ರಂದು ವಾರ್ಡ್ ಸಮಿತಿ ಸಭೆಯ ನಡವಳಿಗಳು;-

- ಶ್ರೀ. ಮೊಹಮ್ಮದ್ ಜಾವೀದ್ ಎ.ಎಸ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
- ಶ್ರೀ. ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀ. ಮಧು, ಕಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ನಿರ್ವಹಣೆ
- ಶ್ರೀ. ಗಂಗಾಧರ .ಕೆ, ಕಿರಿಯ ಅಭಿಯಂತರರು, ಬೆಸ್ಕಾಂ ಸಿ-5 ವಿಭಾಗ
- ಶ್ರೀ. ಕೇಶವ ಪ್ರಭು, ಕಂದಾಯ ಪರೀ ವೀಕ್ಷಕರು, ಕಂದಾಯ ಇಲಾಖೆ
- ಶ್ರೀ. ಜಗದೀಶ್ ರೆಡ್ಡಿ, ಸಂಚಾರಿ ಪೋಲೀಸ್ ಠಾಣೆ ಹೆಬ್ಬಾಳ
- ಶ್ರೀ. ಲಾಸ್ಜರ್ .ಅರ್, ಪರೀವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ
- ಶ್ರೀ ಮುರಳಿ, ಬೀದಿ ದೀಪ ಉಸ್ತುವಾರಿ
- ಶ್ರೀ. ಉದಯ್ ಚಂದನ್, ಕೆ.ಆರ್.ಡಬ್ಲ್ಯೂ.ಎ ಸದಸ್ಯರು ಕನಕನಗರ
- ಶ್ರೀ. ಡೇವಿಡ್ ಫರ್ನಾಂಡಿಸ್, ನಾಗರೀಕರು ಕನಕನಗರ
- ಶ್ರೀ. ವಿ. ಶಂಕರ್ ಕುಮಾರ್, ನಾಗರೀಕರು
- ಶ್ರೀ. ಯು,ಟಿ ಶೆಟ್ಟಿ, ನಾಗರೀಕರು
- ಶ್ರೀ. ಮರಿಯಣ್ಣ, ನಾಗರೀಕರು
- ಶ್ರೀ ಎಮ್. ವಸಿಕರಣ್, ನಾಗರೀಕರು

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮತಿ ಕಾರ್ಯದರ್ಶಿಯವರಾದ ಶ್ರೀ. ಗುರುಸಿದ್ದಪ್ಪ .ಜಿ, ವಾರ್ಡ್ ಸಮಿತಿ ಕಾರ್ಯದರ್ಶಿ, ಸಮಿತಿಯ ಸದಸ್ಯರುಗಳು ಹಾಗೂ ವಾರ್ಡ್ ಸಂಖ್ಯೆ: 22ರ ನಾಗರೀಕರು ಹಾಗೂ ಎಲ್ಲ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಿದರು.

ಶ್ರೀ. ಗುರುಸಿದ್ದಪ್ಪ. ಜಿ ವಾರ್ಡ್ ಕಾರ್ಯದರ್ಶಿಗಳು ಸಭೆಗೆ ಹಾಜರಿದ್ದ ಅಧಿಕಾರಿಗಳ ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು, ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು, ಹಾಗೂ ದಿನಾಂಕ; 01-10-2022 ರಂದು ನಡೆದ ವಾರ್ಡ್ ಸಮಿತಿಯ ನಡವಳಿಗಳನ್ನು ಮನರಾವಲೋಕನ ಮಾಡಲಾಯಿತು. ಹಿಂದಿನ ಸಭೆಯಲ್ಲಿ ತೆಗೆದುಕೊಂಡಿದ್ದ ತೀರ್ಮಾನಗಳನ್ನು ಕುರಿತು ಈ ದಿನಾಂಕದವರೆಗೆ ನಿರ್ವಹಿಸಿದ ಕೆಲಸಗಳ ಬಗ್ಗೆ ಸದಸ್ಯರುಗಳಿಗೆ ತಿಳಿಸಲಾಯಿತು.

| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | | |
|---|---|---|
| ಪೂರ್ವ ವಲಯ (ವಾರ್ಡ್ ನಂ;68, ವಿ. ನಾಗೇನಹಳ್ಳಿ) (ಹಳೆ ವಾರ್ಡ್ ನಂ:22) | | |
| ನೋಡೆಲ್ ಅಧಿಕಾರಿಗಳು ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಪಟ್ಟಿ | | |
| ಕ್ರ. ಸಂ | ವಿಭಾಗ (ಹೆಬ್ಬಾಳ) | ಚರ್ಚಿಸಿದ ವಿಷಯಗಳ ಬಗ್ಗೆ |
| 01 | ಘನತ್ಯಾಜ್ಯ ನಿರ್ವಹಣೆ<br>1) ಶ್ರೀ.ರುದ್ರಮಣಿ (9916257820) ಸಹಾಯಕ ಕಾರ್ಯಪಾಲಕ ಅಭಿಯಂತರರು<br>2) ಶ್ರೀ.ಮಧು, (9742592726) ಕಿರಿಯ ಆರೋಗ್ಯ ಪರಿ ವೀಕ್ಷಕರು | • ಶ್ರೀ ಡೇವಿಡ್ ಫರ್ನಾಂಡಿಸ್, ನಾಗರೀಕರು ಮಾತನಾಡುತ್ತಾ, ಕನಕನಗರದ 10ನೇ ಕ್ರಾಸ್ ರಸ್ತೆಯ ಬದಿಯಲ್ಲಿ ಅಲ್ಲಲ್ಲಿ ಕಸ ಬಿದ್ದಿರುವುದರಿಂದ ಅದನ್ನು ಶೀಘ್ರವಾಗಿ ಸ್ವಚ್ಛಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು. |
| 02 | ಬೀದಿ ದೀಪ<br>1) ಶ್ರೀ.ಸಂದೀಪ್ (9743301942) ಸಹಾಯಕ ಕಾರ್ಯಪಾಲಕ ಅಭಿಯಂತರರು<br>2) ಶ್ರೀ. ಇಬ್ರಾಹಿಮ್ ಶಭಾಸ್ (9686536381) ಉಸ್ತುವಾರಿ ಹಾಗೂ ಗುತ್ತಿಗೆದಾರರು<br>3) ಶ್ರೀ.ಮುರಳಿ (8073479131) ಉಸ್ತುವಾರಿ<br>4) ಶ್ರೀ.ಸತೀಶ್ (9916691122) ಉಸ್ತುವಾರಿ (ಅನ್ ಅಂಡ್ ಅಫ್) | • ಶ್ರೀ ಉದಯ್ ಚಂದನ್, ಕೆ.ಆರ್.ಡ್ಲ್ಯೂ.ಎ ಸದಸ್ಯರು ಮಾತನಾಡುತ್ತಾ, ಕನಕನಗರದ 10ನೇ ಕ್ರಾಸ್ ರಸ್ತೆಯಲ್ಲಿ Street lightಗಳು ಹಾಳಾಗಿರುವುದರಿಂದ ಕೂಡಲೇ ಸರಿಪಡಿಸುವಂತೆ ತಿಳಿಸಿದರು.<br>• ಶ್ರೀ ಡೇವಿಡ್ ಫರ್ನಾಂಡಿಸ್, ನಾಗರೀಕರು ರವರು ಕೂಡಾ ಮಾತನಾಡಿ, ಕನಕನಗರದ 10ನೇ ಕ್ರಾಸ್‌ನ ದೇವಸ್ಥಾನದ ಹತ್ತಿರ Street lightಗಳು ಹಾಳಾಗಿರುವುದರಿಂದ ಕೂಡಲೇ ಸರಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.<br>• ಶ್ರೀ. ಯು.ಟಿ ಶೆಟ್ಟಿ, ನಾಗರೀಕರು ರವರು ಕೂಡಾ ಮಾತನಾಡಿ, ಕನಕನಗರದ 9ನೇ ಕ್ರಾಸ್ ರಸ್ತೆಯಲ್ಲಿ Street lightಗಳು ಹಾಳಾಗಿರುವುದರಿಂದ ಕೂಡಲೇ ಸರಿಪಡಿಸುವಂತೆ ತಿಳಿಸಿದರು. |
| 03 | ಬೃಹತ್ ನೀರು ಕಾಲುವೆ<br>1) ಶ್ರೀ ಈರಣ್ಣ | • ಕಳೆದ ವಾರ್ಡ್ ಸಮಿತಿ ಸಭೆಗಳಲ್ಲಿ ತಮ್ಮ ಇಲಾಖೆ ವತಿಯಿಂದ ವಾರ್ಡ್ ಸಮಿತಿ ಸಭೆಗೆ ಹಾಜರಾಗದೇ ಇರುವುದರಿಂದ ಮುಂದಿನ ಸಭೆಗೆ ತಪ್ಪದೇ ಹಾಜರಾಗುವಂತೆ ಹಾಗೂ ತಮ್ಮ ಇಲಾಖೆಗೆ |

| | | |
|---|---|---|
| | ಸಹಾಯಕ ಕಾರ್ಯಪಾಲಕ ಅಭಿಯಂತರರು<br>2) ಶ್ರೀ.ಶ್ರೀನಿವಾಸ (9980644355) ಸಹಾಯಕ ಅಭಿಯಂತರರು | ಸಂಬಂಧಪಟ್ಟ ಮಾಹಿತಿಗಳನ್ನು ಪಡೆದುಕೊಂಡು ವಾರ್ಡ್ ಸಭೆಗೆ ಹಾಜರಾಗುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು.<br>• ವಾರ್ಡ್‌ವಾರು ಬೃಹತ್ ನೀರು ಕಾಲುವೆಗಳ ವಿವರ ಹಾಗೂ ಹೊಸದಾಗಿ ನಿರ್ಮಿಸಲಾಗುತ್ತಿರುವ ನೀರು ಕಾಲುವೆಗಳ ವಿವರ ಹಾಗೂ ಇನ್ನಿತರ ಕಾಮಗಾರಿಯ ಮಾಹಿತಿಗಳ ಬಗ್ಗೆ ಮುಂದಿನ ಸಭೆಯಲ್ಲಿ ಹಾಜರು ಪಡಿಸುವಂತೆ ತಿಳಿಸಿದರು. |
| 04 | ಆರೋಗ್ಯ ಇಲಾಖೆ<br>1) ಶ್ರೀಮತಿ.ವೇದಾವತಿ (8095254546)<br>2) ಶ್ರೀಮತಿ.ಉಷಾರಾಣಿ (8147022378)<br>ಹಿರಿಯ ಆರೋಗ್ಯ ಪರೀ ವೀಕ್ಷಕರು | • ಶ್ರೀಮತಿ ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ವಾರ್ಡಿನ ಮುಖ್ಯರಸ್ತೆ ಹಾಗೂ ಅಡ್ಡರಸ್ತೆಯಲ್ಲಿ ಕಪ್ಪು ಚುಕ್ಕೆ (Black Spot) ಸ್ಥಳಗಳಲ್ಲಿ ಕಡ್ಡಾಯವಾಗಿ ಔಷಧ ಸಿಂಪಡಣೆ (Fogging spray)ಯನ್ನು ಮಾಡುತ್ತೀರುವ ಬಗ್ಗೆ ಸಭೆಗೆ ಹಾಜರಿದ್ದ ಸದಸ್ಯರಿಗೆ ತಿಳಿಸಿದರು. ಅದರಂತೆ ಕೋವಿಡ್ +ve ಕೇಸ್‌ಗಳು ಈಗ ತುಂಬಾ ಕಡಿಮೆ ಆಗಿದೆ ಎಂದು ತಿಳಿಸಿದರು. ಅದರಂತೆ ಕಪ್ಪು ಚುಕ್ಕೆ ಸ್ಥಳಗಳಲ್ಲಿ ವಾಸನೆ ಹರಡದಂತೆ Bleaching Powder ಅನ್ನು ಸಿಂಪಡಣೆ ಮಾಡುವ ಬಗ್ಗೆ ನೋಡೆಲ್ ಅಧಿಕಾರಿಗಳು ಸಭೆಯಲ್ಲಿದ್ದ ಜನರಿಗೆ ತಿಳಿಸಿದರು. |
| 05 | ಕಾಮಗಾರಿ (ಬಿಬಿಎಂಪಿ)<br>1) ಶ್ರೀ.ವಿಶ್ವನಾಥ್ (9900095559) ಸಹಾಯಕ ಕಾರ್ಯಪಾಲಕ ಅಭಿಯಂತರರು<br>2) ಶ್ರೀ. ಗುರುಸಿದ್ದಪ್ಪ .ಜಿ ಗೋಖಲೆ (9845626122) ಸಹಾಯಕ ಅಭಿಯಂತರರು | • ಶ್ರೀ ಗುರುಸಿದ್ದಪ್ಪ, ಸಹಾಯಕ ಅಭಿಯಂತರರು ಮಾತನಾಡುತ್ತಾ, ವಾರ್ಡ್‌ನ ವ್ಯಾಪ್ತಿಯಲ್ಲಿ ಬರುವ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಅಲ್ಲಲ್ಲಿ ಬಿದ್ದಿರುವ ರಸ್ತೆ ಗುಂಡಿಗಳನ್ನು ವೆಟ್ ಮಿಕ್ಸ್ ಮತ್ತು ಡಾಂಬರು ಮಿಶ್ರಿತ ಜಲ್ಲಿಕಲ್ಲುಗಳಿಂದ ಗುಂಡಿಗಳನ್ನು ಮುಚ್ಚುವ ಕಾಮಗಾರಿ ಈಗಾಗಲೇ ಮುಗಿಸಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಗೆ ತಿಳಿಸಲಾಯಿತು. ಅದರಂತೆ ಮೊನ್ನೆ ಬಿದ್ದ ಬಾರಿ ಮಳೆಯಿಂದಾಗಿ ಮತ್ತೆ ಅಲ್ಲಲ್ಲಿ ಬಿದ್ದಿರುವ ರಸ್ತೆ ಗುಂಡಿ (Potholes)ಗಳನ್ನು ಮುಚ್ಚಿಸಿ ರಸ್ತೆ ಸರಿಪಡಿಸಿಕೊಡುವ ಬಗ್ಗೆ ತಿಳಿಸಿದರು.<br>• ಹಾಗೂ ಬಿಬಿಎಂಪಿ ಅನುದಾನದಡಿಯಲ್ಲಿ ಹೊಸ ಕಾಮಗಾರಿಗಳ ಬಗ್ಗೆ ಮಾಹಿತಿಗಳನ್ನು ನೀಡುವುದಾಗಿ ತಿಳಿಸಿದರು.<br>• ಶ್ರೀ. ಶಿವಶಂಕರ, ನಾಗರೀಕರು ಮಾತನಾಡುತ್ತಾ, ಸಿ.ಐ.ಎಲ್ ಲೇಔಟ್‌ನ 1ನೇ ಕ್ರಾಸ್‌ನಿಂದ 7ನೇ ಕ್ರಾಸ್ ರಸ್ತೆಯವರೆಗೆ ಅಡ್ಡಮೋರಿಯು ಹಾಳಾಗಿರುವುದರಿಂದ ಕೂಡಲೇ ಮೋರಿಯನ್ನು ಸ್ವಚ್ಛಗೊಳಿಸುವಂತೆ ತಿಳಿಸಿದರು. ಈಗಾಗಲೇ ಕಾಮಗಾರಿ ಪ್ರಗತಿಯಲ್ಲಿರುವ ಬಗ್ಗೆ ಸಹಾಯಕ ಅಭಿಯಂತರರು ಸಭೆಯಲ್ಲಿದ್ದ ಜನರಿಗೆ ತಿಳಿಸಿದರು.<br>• ಶ್ರೀ ಕಾರ್ತಿಕ್, ನಾಗರೀಕರು ಮಾತನಾಡುತ್ತಾ, ಸಿ.ಐ.ಎಲ್ ಲೇಔಟ್‌ನ ಮುಖ್ಯರಸ್ತೆಯು (ರಾಜಕಾಲುವೆ ಪಕ್ಕದ ರಸ್ತೆ) ತೀರಾ ಹಾಳಾಗಿರುವುದರಿಂದ ರಸ್ತೆಯನ್ನು ಮರು ಡಾಂಬರೀಕರಣ ಮಾಡುವಂತೆ ಮನವಿ ಮಾಡಿದರು. |

Bruhat Bengaluru
Mahanagara Palike

| | | |
|---|---|---|
| 06 | ಕಂದಾಯ ಇಲಾಖೆ<br><br>1) ಶ್ರೀ.ರಾಜಣ್ಣ (9886329447) ಸಹಾಯಕ ಕಂದಾಯ ಅಧಿಕಾರಿ<br>2) ಶ್ರೀ.ಕೇತನ್ (9980166619) ಅಸೆಸ್ಸರ್<br>3) ಶ್ರೀ.ಕೇಶವಪ್ರಭು (9945412385) ಕಂದಾಯ ಪರೀ ವೀಕ್ಷಕರು | • ವಾರ್ಡ್‌ವಾರು ಕಂದಾಯ ವಸೂಲಾತಿ ಮತ್ತು ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಸಿದಂತೆ ದಾಖಲಾತಿಗಳನ್ನು ಸಹಾಯಕ ಕಂದಾಯ ಅಧಿಕಾರಿಗಳಿಂದ ಪಡೆದು ಮುಂದಿನ ಸಭೆಯಲ್ಲಿ ದಾಖಲಾತಿಗಳನ್ನು ನೀಡುವುದಾಗಿ ಸಭೆಗೆ ಹಾಜರಿದ್ದ ಅಧಿಕಾರಿಗಳಿಗೆ ತಿಳಿಸಿದರು. |
| 07 | ಉದ್ಯಾನವನ | ವಿ. ನಾಗೇನಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಉದ್ಯಾನವನ ಇರುವುದಿಲ್ಲ ಎಂದು ಕಾರ್ಯದರ್ಶಿಯವರು ಸಭೆಯಲ್ಲಿದ್ದ ಜನರಿಗೆ ತಿಳಿಸಿದರು. |
| 08 | ಅರಣ್ಯ ಇಲಾಖೆ<br><br>1) ಶ್ರೀ.ರವೀಂದ್ರನಾಥ್ (6361903330) ಉಸ್ತುವಾರಿ | • ಕಳೆದ ವಾರ್ಡ್ ಸಮಿತಿ ಸಭೆಗಳಲ್ಲಿ ಇಲಾಖೆ ವತಿಯಿಂದ ವಾರ್ಡ್ ಸಮಿತಿ ಸಭೆಗೆ ಹಾಜರಾಗದೇ ಇರುವುದರಿಂದ ಮುಂದಿನ ಸಭೆಗೆ ತಪ್ಪದೇ ಹಾಜರಾಗುವಂತೆ ಈಗಾಗಲೇ ನೋಟೀಸ್ ಅನ್ನು ಹೊರಡಿಸಲಾಗಿದ್ದು, ಮುಂದಿನ ಸಭೆಯಲ್ಲಿ ತಮ್ಮ ಇಲಾಖೆಗೆ ಸಂಬಂಧಪಟ್ಟ ಮಾಹಿತಿಗಳನ್ನು ಪಡೆದುಕೊಂಡು ವಾರ್ಡ್ ಸಭೆಗೆ ಹಾಜರಾಗುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು.<br><br>• ಶ್ರೀ ಕಾರ್ತಿಕ್, ನಾಗರೀಕರು ಮಾತನಾಡುತ್ತಾ, ಸಿ.ಐ.ಎಲ್ ಲೇಔಟ್ 9ನೇ ಕ್ರಾಸ್‌ನಲ್ಲಿ ಒಣಮರಗಳಿರುವುದರಿಂದ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಕೂಡಲೇ ಒಣಮರಗಳನ್ನು ತೆರವುಗೊಳಿಸುವಂತೆ ತಿಳಿಸಿದರು.<br><br>• ಶ್ರೀ. ಶಿವಶಂಕರ್, ನಾಗರೀಕರು ಮಾತನಾಡುತ್ತಾ, ಸಿ.ಐ.ಎಲ್ ಲೇಔಟ್ 6ನೇ ಕ್ರಾಸ್ ರಸ್ತೆಯಲ್ಲಿ ವಿದ್ಯುತ್ ಕಂಬದ ಮೇಲೆ ಮರದ ಕೊಂಬೆ ಹಾದುಹೋಗಿರುವುದರಿಂದ ಶೀಘ್ರವೇ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಮರದ ಕೊಂಬೆಗಳನ್ನು ತೆರವುಗೊಳಿಸುವಂತೆ ತಿಳಿಸಿದರು.<br><br>• ಶ್ರೀ ಯು.ಟಿ ಶೆಟ್ಟಿ, ನಾಗರೀಕರು ಮಾತನಾಡುತ್ತಾ, ಕನಕನಗರದ 9ನೇ ಕ್ರಾಸ್ ರಸ್ತೆಯಲ್ಲಿ ಮರದ ಕೊಂಬೆಗಳು ರಸ್ತೆಯ ಮೇಲೆ ಹಾದುಹೋಗುತ್ತಿರುವುದರಿಂದ ಸಾರ್ವಜನಿಕರು ಸಂಚಾರಿಸಲು ತೀರಾ ಕಷ್ಟಕರವಾಗುತ್ತಿರುವುದರಿಂದ ಕೂಡಲೇ ಮರದ ಕೊಂಬೆಗಳನ್ನು ತೆರವುಗೊಳಿಸುವಂತೆ ತಿಳಿಸಿದರು.<br><br>• ಶ್ರೀ ಶಂಕರ್ ನಾಗರೀಕರು ಮಾತನಾಡುತ್ತಾ, ಸಿ.ಐ.ಎಲ್ ಲೇಔಟ್ 6ನೇ ಕ್ರಾಸ್ ರಸ್ತೆಯಲ್ಲಿರುವ ವಿದ್ಯುತ್ ಕಂಬದ ಸುತ್ತಲ್ಲೂ ಮರದ ಕೊಂಬೆಗಳಿರುವುದರಿಂದ ಸರಿಯಾದ ಬೆಳಕು ಕಾಣದೇ ಇರುವುದರಿಂದ ಕೂಡಲೇ ಮರದ ಕೊಂಬೆಗಳನ್ನು ತೆರವುಗೊಳಿಸುವಂತೆ |

Bruhat Bengaluru
Mahanagara Palike

| | | |
|---|---|---|
| | | ತಿಳಿಸಿದರು. |
| 09 | <u>ಪಶು ಸಂಗೋಪನೆ</u><br>1) ಶ್ರೀ.ಮಲ್ಲಪ್ಪ (9480685259) ವೈದ್ಯರು<br>2) ಶ್ರೀ.ಶ್ರೀನಿವಾಸ (9448704480) ಪರೀ ಕ್ಷಕರು | • ಶ್ರೀ. ಚಂದ್ ಪಾಷಾ, ಕೆ.ಆರ್.ಡ್ಲ್ಯೂ.ಎ ಸದಸ್ಯರು, ಮಾತನಾಡುತ್ತಾ, ಕನಕನಗರದ 18ನೇ ಕ್ರಾಸ್ ಹಾಗೂ 20ನೇ ಕ್ರಾಸ್ ರಸ್ತೆಯ ಮಧ್ಯೆಯಲ್ಲಿದ್ದ ಖಾಸಗಿ ನಿವೇಶನದಲ್ಲಿ ಹಾವುಗಳ ಸಮಸ್ಯೆ ಇರುವುದರಿಂದ ಕೂಡಲೇ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಸ್ಯೆಯನ್ನು ಬಗೆಹರಿಸುವಂತೆ ತಿಳಿಸಿದರು. ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳು ಸ್ಥಳವನ್ನು ಪರಿಶೀಲಿಸಿದಾಗ ಸಾರ್ವಜನಿಕರು, ಈಗ ಯಾವುದೇ ಹಾವುಗಳ ಸಮಸ್ಯೆ ಇಲ್ಲವೆಂದು ತಿಳಿಸಿರುತ್ತಾರೆ. |
| 10 | <u>ನೀರು ಮತ್ತು ಒಳಚರಂಡಿ ಇಲಾಖೆ</u><br>1) ಶ್ರೀಮತಿ.ಕಲ್ಪನ (9845444060) ಸಹಾಯಕ ಕಾರ್ಯಪಾಲಕ ಅಭಿಯಂತರರು<br>2) ಶ್ರೀ. ಕುಮಾರ್ .ಎಸ್ (9482798909) ಸಹಾಯಕ ಅಭಿಯಂತರರು<br>3) ಶ್ರೀ.ಲಾಸ್ಕರ್(9611983665) ಪರೀವೀಕ್ಷಕರು | • ಶ್ರೀ ಶಿವಶಂಕರ್ ನಾಗರೀಕರು ಮಾತನಾಡುತ್ತಾ, ಸಿ.ಐ.ಎಲ್ ಲೇಔಟ್ ನ 7ನೇ ಅಡ್ಡರಸ್ತೆಯಲ್ಲಿ ನೀರಿನ ಸರಬರಾಜು ಸರಿಯಾಗಿ ಪೂರೈಕೆ ಆಗದೇ ಸಾರ್ವಜನಿಕರು ನೀರಿನ ಸಮಸ್ಯೆಯನ್ನು ಎದುರಿಸುತ್ತೀರುವುದರಿಂದ ಕೂಡಲೇ ಸರಿಯಾದ ರೀತಿಯಲ್ಲಿ ನೀರು ಸರಬರಾಜು ಆಗುವಂತೆ ಕ್ರಮಕೈಗೊಳ್ಳಲು ತಿಳಿಸಿದರು. ಈಗಾಗಲೇ ಅದಕ್ಕೆ ಸಂಬಂಧಪಟ್ಟ . ಅಧಿಕಾರಿಗಳು ಕ್ರಮಕೈಗೊಂಡಿರುವುದಾಗಿ ತಿಳಿಸಿದರು |
| 11 | <u>ಪೋಲೀಸ್/ಟ್ರಾಫಿಕ್</u><br><u>ಪೋಲೀಸ್ ,ಠಾಣೆ ಹೆಬ್ಬಾಳ ವಿಭಾಗ</u><br>1) ಶ್ರೀ ಶಿವ (9164102272) ಪಿ.ಸಿ | • ಕಳೆದ ವಾರ್ಡ್ ಸಮಿತಿ ಸಭೆಗಳಲ್ಲಿ ಇಲಾಖೆ ವತಿಯಿಂದ ವಾರ್ಡ್ ಸಮಿತಿ ಸಭೆಗೆ ಹಾಜರಾಗದೇ ಇರುವುದರಿಂದ ಮುಂದಿನ ಸಭೆಗೆ ತಪ್ಪದೇ ಹಾಜರಾಗುವಂತೆ ಹಾಗೂ ತಮ್ಮ ಇಲಾಖೆಗೆ ಸಂಬಂಧಪಟ್ಟ ಮಾಹಿತಿಗಳನ್ನು ಪಡೆದುಕೊಂಡು ವಾರ್ಡ್ ಸಭೆಗೆ ಹಾಜರಾಗುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು.<br>• ಶ್ರೀ. ಮುನಿರಾಜು, ನಾಗರೀಕರು ಮಾತನಾಡುತ್ತಾ, ವಿ. ನಾಗೇನಹಳ್ಳಿಯ ಎಮ್, ಆರ್ ಗಾರ್ಡನ್ ಬಡಾವಣೆ ರಸ್ತೆಯಲ್ಲಿ ಮಕ್ಕಳನ್ನು ಕಳವು ಮಾಡುತ್ತಿದ್ದಾರೆ ಎಂದು ಬಡಾವಣೆಯ ನಾಗರೀಕರು ಹೇಳಿದ್ದರಿಂದ ಕೂಡಲೇ ಅದಕ್ಕೆ ಸಂಬಂಧಪಟ್ಟ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು. |
| | ಪೋಲೀಸ್ ಠಾಣೆ ಕಾವಲ್ ಬೈಸಂದ್ರ<br>ಪೋಲೀಸ್ ಠಾಣೆ ಡಿ.ಜೆ ಹಳ್ಳಿ ವಿಭಾಗ<br>1) ಅಕ್ಷಯ್ (9972153491) ರೈಟರ್ | • ಕಳೆದ ವಾರ್ಡ್ ಸಮಿತಿ ಸಭೆಗಳಲ್ಲಿ ಇಲಾಖೆ ವತಿಯಿಂದ ವಾರ್ಡ್ ಸಮಿತಿ ಸಭೆಗೆ ಹಾಜರಾಗದೇ ಇರುವುದರಿಂದ ಹಾಗೂ ತಮ್ಮ ಇಲಾಖೆಗೆ ಸಂಬಂಧಪಟ್ಟ ಮಾಹಿತಿಗಳನ್ನು ಪಡೆದುಕೊಂಡು ವಾರ್ಡ್ ಸಭೆಗೆ ಹಾಜರಾಗುವಂತೆ ನೋಡೆಲ್ ಅಧಿಕಾರಿಗಳು ಹಾಜರಾಗದೇ ಇರುವ ಅಧಿಕಾರಿಗಳಿಗೆ ತಿಳಿಸಿದರು. |

| | | |
|---|---|---|
| | <u>ಟ್ರಾಫಿಕ್</u><br><u>ಸಂಚಾರಿ ಪೋಲೀಸ್ ಠಾಣೆ</u><br>1) ಶ್ರೀ.ಜಗದೀಶ್‌ರೆಡ್ಡಿ (8867557016) ಪಿ.ಸಿ | • ಶ್ರೀ ಕಾರ್ತಿಕ್, ನಾಗರೀಕರು ಮಾತನಾಡುತ್ತಾ, ಸಿ.ಐ.ಎಲ್ ಲೇಔಟ್‌ನ ಅಡ್ಡರಸ್ತೆ ಹಾಗೂ ಮುಖ್ಯರಸ್ತೆಗಳಲ್ಲಿ ಅಪರಿಚಿತರ ವಾಹನಗಳು ನಿಲ್ಲುಗಡೆಯಾಗಿರುವುದರಿಂದ ಸಾರ್ವಜನಿಕರು ವಾಹನ ಸಂಚಾರ ಮಾಡಲು ಸಮಸ್ಯೆಯಾಗುತ್ತಿರುವುದರಿಂದ ಕೂಡಲೇ ಕ್ರಮ ಜಾರುಗಿಸುವಂತೆ ತಿಳಿಸಿದರು. ಈಗಾಗಲೇ ರಸ್ತೆಯ ಮೇಲೆ ನಿಲ್ಲುಗಡೆಯಾಗಿದ್ದ ಅಪರಿಚಿತರ ವಾಹನಗಳನ್ನು ತೆರವುಗೊಳಿಸಿರುವುದಾಗಿ ತಿಳಿಸಿದರು.<br>• ಶ್ರೀ ಕೀರ್ತಿ ರಾಜನ್ ನಾಗರೀಕರು ಮಾತನಾಡುತ್ತಾ, ಸಿ.ಐ.ಎಲ್ ಲೇಔಟ್‌ನಲ್ಲಿ ರಸ್ತೆ ಬದಿಯಲ್ಲಿ ಅನವಶ್ಯಕವಾಗಿ ಕ್ಯಾಬ್ ಕಾರುಗಳು ನಿಲ್ಲುಗಡೆ ಮಾಡುವುದರಿಂದ ಸಾರ್ವಜನಿಕರ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತೀರುವುದರಿಂದ ಕೂಡಲೇ ಕ್ರಮಕೈಗೊಳ್ಳುವಂತೆ ತಿಳಿಸಿದರು.<br>• ಶ್ರೀ. ಜಗದೀಶ್ ರೆಡ್ಡಿ, ಪಿ.ಸಿ ಸಂಚಾರಿ ಪೋಲೀಸ್ ರವರು ಮಾತನಾಡುತ್ತಾ, ಸುಲ್ತಾನ್ ಪಾಳ್ಯದ ಮುಖ್ಯರಸ್ತೆಯ ಹಾಗೂ ಸುಮಂಗಲಿ ಸೇವಾ ಆಶ್ರಮ ಎರಡು ಬದಿಯ ಫುಟ್‌ಪಾತ್ ಮೇಲೆ ಅನಧಿಕೃತವಾಗಿ ಅಂಗಡಿಮುಂಗಟ್ಟುಗಳು ಇರುವುದರಿಂದ ಕೂಡಲೇ ಅದನ್ನು ತೆರವುಗೊಳಿಸಿ ಸ್ವಚ್ಚಗೊಳಿಸಬೇಕೆಂದು ತಿಳಿಸಿದರು. |
| 12 | <u>ಬೆಸ್ಕಾಂ</u><br><u>ಹೆಬ್ಬಾಳ ವಿಭಾಗ ಸಿ–4</u><br>1) ಶ್ರೀ ರಾಜು (9449844644) ಸಹಾಯಕ ಕಾರ್ಯಪಾಲಕ ಅಭಿಯಂತರರು<br>2) ಶ್ರೀಮೊಹಮ್ಮದ್ (9449864897) ಸಹಾಯಕ ಅಭಿಯಂತರರು | • ಕಳೆದ ವಾರ್ಡ್ ಸಮಿತಿ ಸಭೆಗಳಲ್ಲಿ ಇಲಾಖೆ ವತಿಯಿಂದ ವಾರ್ಡ್ ಸಮಿತಿ ಸಭೆಗೆ ಹಾಜರಾಗದೇ ಇರುವುದರಿಂದ ಮುಂದಿನ ಸಭೆಗೆ ತಪ್ಪದೇ ಹಾಜರಾಗುವಂತೆ ಹಾಗೂ ತಮ್ಮ ಇಲಾಖೆಗೆ ಸಂಬಂಧಪಟ್ಟ ಮಾಹಿತಿಗಳನ್ನು ಪಡೆದುಕೊಂಡು ವಾರ್ಡ್ ಸಭೆಗೆ ಹಾಜರಾಗುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು. ಹಾಗೂ ಸಾರ್ವಜನಿಕರಿಗೆ ವಿದ್ಯುತ್ ಸರಬರಾಜು ತೊಂದರೆಯಾಗದಂತೆ ನೋಡಿಕೊಳ್ಳಲು ತಿಳಿಸಿದರು. |
| | <u>ಕಾವಲ್ ಬೈಸಂದ್ರ ವಿಭಾಗ ಸಿ–5</u><br>1) ಶ್ರೀ.ಪ್ರಭಾಕರ್ (9449844645) ಸಹಾಯಕ ಕಾರ್ಯಪಾಲಕ ಅಭಿಯಂತರರು<br>2) ಶ್ರೀ.ರಾಮು (9449864899) ಸಹಾಯಕ ಅಭಿಯಂತರರು<br>3) ಶ್ರೀ. ಗಂಗಾಧರ್ .ಕೆ, ಕಿರಿಯ ಅಭಿಯಂತರರು | • ಶ್ರೀ ಗಂಗಾಧರ್ .ಕೆ, ಕಿರಿಯ ಅಭಿಯಂತರರು, ಮಾತನಾಡುತ್ತಾ, ವಾರ್ಡಿನ ವ್ಯಾಪ್ತಿಯಲ್ಲಿ ಬರುವ ಎಲ್ಲಾ Street light ಗಳಿಗೆ ಮೀಟರ್ ಇಲ್ಲದೆ ಇರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಬೆಸ್ಕಾಂ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿ ಹೊಸದಾಗಿ ಮೀಟರ್‌ಗಳನ್ನು ಅಳವಡಿಸುವಂತೆ ತಿಳಿಸಿದರು. ಅದರಂತೆ Switch buttons(on/off) ಕೂಡ ಅಳವಡಿಸುವಂತೆ ತಿಳಿಸಿದರು.<br>• ಹಾಗೂ ವಾರ್ಡಿನ ವ್ಯಾಪ್ತಿಯಲ್ಲಿ ಬರುವ ಕೆಲವು ಬೋರ್ ವೆಲ್‌ಗಳು ವಿದ್ಯುತ್ ಕಂಬಕ್ಕೆ ನೇರ ಸಂಪರ್ಕವನ್ನು ಹೊಂದಿರುವುದರಿಂದ ಮೀಟರ್ ಇಲ್ಲದೆ ಇರುವ ಕಾರಣ ಬೆಸ್ಕಾಂ ಇಲಾಖೆಗೆ ಅರ್ಜಿಯನ್ನು |

Bruhat Bengaluru
Mahanagara Palike

| | | |
|---|---|---|
| | | ಸಲ್ಲಿಸಿ ಮೀಟರ್‌ಗಳನ್ನು ಪಡೆದು ಬೋರ್‌ವೆಲ್‌ಗಳಿಗೆ ಮೀಟರ್‌ಗಳನ್ನು ಅಳವಡಿಸುವಂತೆ ತಿಳಿಸಿದರು. ತಪ್ಪಿದ್ದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸುವುದಾಗಿ ತಿಳಿಸಿದರು.<br><br>• ವಾರ್ಡಿನ ವ್ಯಾಪ್ತಿಯಲ್ಲಿರುವ ಸಿ.ಸಿ.ಟಿ.ವಿ ಕ್ಯಾಮರಾಗಳ ವಿದ್ಯುತ್ ಬಿಲ್‌ಅನ್ನು ಪಾವತಿಸದೆ ಇರುವುದರಿಂದ ಸಿ.ಸಿ.ಟಿ.ವಿ ಕ್ಯಾಮರಾಗಳ ಸಂಪರ್ಕವನ್ನು ಕಡಿತಗೊಳಿಸುವುದಾಗಿ ತಿಳಿಸಿದರು ಹಾಗೂ ಕೆಲವು ಸಿ.ಸಿ.ಟಿ.ವಿ ಕ್ಯಾಮರಾಗಳಿಗೆ ಮೀಟರ್ ಇಲ್ಲದೆ ಇರುವುದರಿಂದ ಕೂಡಲೇ ಮೀಟರ್‌ಗಳನ್ನು ಅಳವಡಿಸುವಂತೆ ತಿಳಿಸಿದರು. |

Bruhat Bengaluru
Mahanagara Palike

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡಕ್ರಮದ ಬಗ್ಗೆ ವರದಿ ಪೂರ್ಣಗೊಂಡ ಭಾವಚಿತ್ರ ಹಾಗೂ ಲಿಖಿತ ವರದಿ ತಯಾರಿಸಿಕೊಂಡು ಹಾಜರಾಗಲು ಸೂಚಿಸಿ ಹಾಗೂ ಹಾಜರಾಗದೆ ಇರುವ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಹಾಜರಾಗಿರಬೇಕೆಂದು ಸೂಚಿಸಿದರು. ಸಭೆಯನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಕಾರ್ಯದರ್ಶಿಯವರಾದ ಗುರುಸಿದ್ದಪ್ಪ .ಜಿ ರವರ ವಂದನಾರ್ಪಣೆಯೊಂದಿಗೆ ಮಧ್ಯಾಹ್ನ 01;15ಕ್ಕೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಹಾಗೂ ಕಳೆದ ವಾರ್ಡ್ ಸಭೆಗೆ ಎಲ್ಲಾ ಇಲಾಖೆಯವರು ಗೈರುಹಾಜರಾಗದೇ ಇರುವುದರಿಂದ ಎಲ್ಲಾ ಇಲಾಖೆ ವತಿಯಿಂದ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ ಮುಂದಿನ ಸಭೆಗೆ ತಪ್ಪದೇ ಹಾಜರಾಗುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು.

(ಗುರುಸಿದ್ದಪ್ಪ .ಜಿ)
ವಾರ್ಡ್ ಸಮಿತಿ ಕಾರ್ಯದರ್ಶಿ
ಹಾಗೂ
ಸಹಾಯಕ ಅಭಿಯಂತರರು ವಾರ್ಡ್ ನಂ:22

(ಶ್ರೀ. ಮೊಹಮ್ಮದ್ ಜಾವೀದ್ ಎ.ಎಸ್)
ನೋಡೆಲ್ ಅಧಿಕಾರಿರವರು
ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು

NODAL OFFICER
WARD NO:22
BBMP